**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 54/2022**

**ಸಾಕ್ಷಿಗೆ ದಿನಾಂಕ 20.1.2025 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಜಬೀರ್ | ಪಿ.ಡಬ್ಲ್ಯೂ-2 |
| ತಂದೆಯ/ಗಂಡನ ಹೆಸರು | : | ಮೊಹಮದ್ ಜಾನ್ | ಸಿ.ಡಬ್ಲ್ಯೂ-6 |
| ವಯಸ್ಸು | : | 50 | |
| ಉದ್ಯೋಗ | : | ಚಾಲಕ | |
| ವಾಸಸ್ಥಳ | : | ಸರಗೂರು | |

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿರುತ್ತೇನೆ. ನಾನು ತರಕಾರಿ ಸಾಗಾಟ ಮಾಡುವ ಗೂಡ್ಸ ಗಾಡಿಯನ್ನು ಓಡಿಸುತ್ತಿರುತ್ತೇನೆ. ಅಪಘಾತದಲ್ಲಿ ತೀರಿಕೊಂಡ ಶಹಜಾದ್ ರವರನ್ನು ನೋಡಿರುತ್ತೇನೆ. ಅವರು ನನ್ನ ದೊಡ್ಡಪ್ಪನ ಮಗ. ಈಗ ಸುಮಾರು 4 ವರ್ಷದ ಹಿಂದೆ ಬೆಳಿಗ್ಗೆ 5.30 ರಲ್ಲಿ ನಾನು ಹ್ಯಾಂಡಪೋಸ್ಟನಲ್ಲಿರುವ ತರಕಾರಿ ಮಾರುಕಟ್ಟೆಗೆ ತರಕಾರಿಯನ್ನು ತೆಗೆದುಕೊಂಡು ಹೋಗಲು ನನ್ನ ಗೂಡ್ಸ ವಾಹನದಲ್ಲಿ ಬಂದಿದ್ದು, ನನ್ನ ಮುಂದೆ ನನ್ನ ದೊಡ್ಡಪ್ಪನ ಮಗನಾದ ಶಹಜಾದ್ ರವರು ಜುಪಿಟರ್ ಬೈಕಿನಲ್ಲಿ ಹ್ಯಾಂಡಪೋಸ್ಟ್ ಕಡೆಯಿಂದ ಹೆಚ್.ಡಿ.ಕೋಟೆ ಕಡೆಗೆ ಬರುತ್ತಿದ್ದು, ಆಗ ಹೆಚ್.ಡಿ.ಕೋಟೆ ಕಡೆಯಿಂದ ಒಂದು ಮಹಿಂದ್ರ ಜೆತೋ ವಾಹನದ ಚಾಲಕನು ಒಬ್ಬ ಮಹಿಳೆಯನ್ನು ಕೂರಿಸಿಕೊಂಡು ವೇಗವಾಗಿ ಚಾಲಯಿಸಿಕೊಂಡು ಬಂದು ಸದರಿ ಶಹಜಾದ್ ರವರ ಬೈಕಿಗೆ ಡಿಕ್ಕಿ ಮಾಡಿ ವಾಹನವನ್ನು ನಿಲ್ಲಿಸದೇ ಹೋಗಿರುತ್ತಾನೆ. ನಂತರ ನಾನು ಸದರಿ ಶಹಜಾದ್ ರವರನ್ನು ನೋಡಿದಾಗ ಆತನ ಕಿವಿಯ ಹತ್ತಿರ ಗಾಯವಾಗಿ ರಕ್ತ ಬರುತ್ತಿತ್ತು, ಆತನ ಬಲಗಾಲು ಮುರಿದು ಹೋಗಿತ್ತು. ಆತನು ಸ್ಥಳದಲ್ಲಿ ತೀರಿಕೊಂಡಿದ್ದನು. ನಂತರ ಸದರಿ ವಿಚಾರವನ್ನು ನಾನು ಚಾಸ 1 ರವರಿಗೆ ಫೋನ್ ಮೂಲಕ ತಿಳಿಸಿದ್ದು, ಅವರು ಸ್ಥಳಕ್ಕೆ ಬಂದ ನಂತರ ನಾನು ನನಗೆ ಕೆಲಸ ಇದುದ್ದರಿಂದ ತರಕಾರಿ ಮಾರುಕಟ್ಟೆಗೆ ಹೋಗಿರುತ್ತೇನೆ. ಸದರಿ ಅಪಘಾತ ಮಾಡಿದ ವಾಹನದ ಕೊನೆಯ ಸಂಖ್ಯೆ 75 ಆಗಿದ್ದು ಪೂರ್ತಿ ಸಂಖ್ಯೆ ಗೊತ್ತಿರುವುದಿಲ್ಲ. ಚಾಸ 1 ರವರು ಸ್ಥಳಕ್ಕೆ ಬಂದ ನಂತರ ಠಾಣೆಗೆ ಹೋಗಿ ದೂರನ್ನು ನೀಡಿರುತ್ತಾರೆ. ಚಾಸ 1 ರವರು ದೂರು ನೀಡಿದ ನಂತರ

ಹೆಚ್.ಡಿ.ಕೋಟೆ ಪೋಲಿಸರು ಘಟನ ಸ್ಥಳಕ್ಕೆ ಭೇಟಿ ನೀಡಿ ನಾನು ತೋರಿಸಿದ ಘಟನ ಸ್ಥಳವನ್ನು ಪರಿಶೀಲಿಸಿ ಸ್ಥಳದಲ್ಲಿ ಅಪಘಾತಕ್ಕೆ ಒಳಪಟ್ಟ ಜುಪಿಟರ್ ಸ್ಕೂಟರನ್ನು ಅಮಾನತ್ತುಪಡಿಸಿಕೊಂಡು ಮಹಜರನ್ನು ಮಾಡಿರುತ್ತಾರೆ. ಸಾಕ್ಷಿದಾರರು ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ5 ಎಂದು, ಸಾಕ್ಷಿಯ ಸಹಿಯನ್ನು ನಿಪಿ5 ಎ ಎಂದು ಗುರುತಿಸಲಾಯಿತು. ಆಗ ಪೋಲಿಸರು ಸದರಿ ಸ್ಥಳದಲ್ಲಿ ಅಳತೆಯನ್ನು ಮಾಡಿ ನಕಾಶೆಯನ್ನು ತಯಾರಿಸಿರುತ್ತಾರೆ. ಸಾಕ್ಷಿದಾರರು ನಕಾಶೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ6 ಎಂದು, ಸಾಕ್ಷಿಯ ಸಹಿಯನ್ನು ನಿಪಿ6 ಎ ಎಂದು ಗುರುತಿಸಲಾಯಿತು. ಸದರಿ ಸ್ಥಳದಲ್ಲಿ ಪೋಲಿಸರು ಭಾವಚಿತ್ರವನ್ನು ತೆಗೆದಿದ್ದು, ಸಾಕ್ಷಿದಾರರು ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ7 ಎಂದು ಗುರುತಿಸಲಾಯಿತು. ಅಪಘಾತವಾದ ಸ್ವಲ್ಪ ದಿನಗಳ ನಂತರ ನನ್ನನ್ನು ಹೆಚ್.ಡಿ.ಕೋಟೆ ಪೋಲಿಸರು ಠಾಣೆಗೆ ಕರೆಸಿದ್ದು ಅಲ್ಲಿ ಅಪಘಾತ ಮಾಡಿ ಪರಾರಿಯಾಗಿದ್ದ ವ್ಯಕ್ತಿಯನ್ನು ಹಾಗೂ ಅಪಘಾತ ಮಾಡಿದ ವಾಹನವನ್ನು ತೋರಿಸಿರುತ್ತಾರೆ. ನಾನು ಸದರಿ ವ್ಯಕ್ತಿಯನ್ನು ಹಾಗೂ ವಾಹನವನ್ನು ನೋಡಿರುತ್ತೇನೆ. ಸದರಿ ವ್ಯಕ್ತಿಯ ಹೆಸರು ಈಗ ಮರೆತು ಹೋಗಿದ್ದು ಈ ದಿನ ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯಾಗಿದ್ದು ಆತನು ತುಂಬಸೋಗೆ ಗ್ರಾಮದವನಾಗಿರುತ್ತಾನೆ. ಅಪಘಾತದ ವಿಚಾರವಾಗಿ ಪೋಲಿಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಈಗ ನೋಡುತ್ತಿರುವ ನಾಲ್ಕು ಭಾವಚಿತ್ರಗಳಲ್ಲಿರುವ ವಾಹನಗಳು ಅಪಘಾತಕ್ಕೆ ಸಂಬಂಧಪಟ್ಟ ವಾಹನಗಳಾಗಿರುತ್ತವೆ. ಸದರಿ ಭಾವಚಿತ್ರಗಳನ್ನು ನಿಪಿ8 ರಿಂದ ನಿಪಿ11 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿತರ ಪರ ಶ್ರೀ ಎಸ್.ಕೆ.ಎಸ್ ವಕೀಲರಿಂದಃ**

ನಾನು ಆರೋಪಿತರನ್ನು ಇದೇ ಪ್ರಥಮ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿ. ಬೆಳಿಗ್ಗೆ 5.30 ರಲ್ಲಿ ಕತ್ತಲು ಇರುತ್ತದೆ ಎಂದರೆ ಸರಿ. ಕತ್ತಲೆಯ ಸಮಯದಲ್ಲಿ ವಾಹನದ ಬೆಳಕನ್ನು ಹಾಕಿ ವಾಹನವನ್ನು ಚಲಾಯಿಸಿದರೆ ಯಾರು ಚಲಾಯಿಸುತ್ತಿದರೆ ಎಂದು ಗೊತ್ತಾಗುವುದಿಲ್ಲ ಎಂದರೆ ಸರಿ. ನನ್ನ ದೊಡ್ಡಪ್ಪನ ಮಗ ಶಹಜಾದ್ ಯಾವ ಕಾರಣಕ್ಕೆ ಹ್ಯಾಂಡಪೋಸ್ಟ್ ಕಡೆಗೆ ಹೋಗಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ನಾನು 1 ನೇ ಆರೋಪಿಯನ್ನು ಸ್ಥಳದಲ್ಲಿ ನೋಡಿರುವುದಿಲ್ಲ ಎಂದರೆ ಸರಿ. ನಾನು ಅಪಘಾತವಾದ ಒಂದುವರೆ ಗಂಟೆಯ ನಂತರ ಸ್ಥಳಕ್ಕೆ ಹೋಗಿರುತ್ತೇನೆ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಚಾರಗಳು ಸುಳ್ಳು, ನಾನು ಯಾವುದೇ ಅಪಘಾತವನ್ನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಮೃತ ವ್ಯಕ್ತಿಯು ನನ್ನ ದೊಡ್ಡಪ್ಪನ ಮಗನಾದ್ದರಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ